SL. No. : NNN

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RF**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 97-K**

**Code No. : 97-K**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ / Regular Fresh)**

ದಿನಾಂಕ : 07. 04. 2017 ]
[ Date : 07. 04. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ]
[ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ]
[ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ. ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಭಾರತದ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರು

   (A) ಡಾ॥ ಬಾಬು ರಾಜೇಂದ್ರ ಪ್ರಸಾದ್

   (B) ಸಚ್ಚಿದಾನಂದ ಸಿನ್ಹಾ

   (C) ಸರ್ದಾರ್ ವಲ್ಲಭಭಾಯಿ ಪಟೇಲ್

   (D) ಡಾ॥ ಬಿ.ಆರ್. ಅಂಬೇಡ್ಕರ್

2. 'ಸಮಾಜವಾದ' ಎಂಬ ಪದವನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸಲು ಮಾಡಿದ ತಿದ್ದುಪಡಿ

   (A) 42ನೇ ತಿದ್ದುಪಡಿ

   (B) 45ನೇ ತಿದ್ದುಪಡಿ

   (C) 40ನೇ ತಿದ್ದುಪಡಿ

   (D) 44ನೇ ತಿದ್ದುಪಡಿ

3. ನಮ್ಮ ಸಂವಿಧಾನದ 21(ಎ) ವಿಧಿ ಇದಕ್ಕ ಸಂಬಂಧಿಸಿರುವುದು

   (A) ಜೀತ ಮತ್ತು ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆ

   (B) ಉಚಿತ ಮತ್ತು ಕಡ್ಡಾಯ ಶಿಕ್ಷಣ

   (C) ಸಾರ್ವಜನಿಕ ಆರೋಗ್ಯ ಮತ್ತು ಶಾಂತಿ

   (D) ಸಾರ್ವಜನಿಕ ರಕ್ಷಣೆ ಮತ್ತು ನೈತಿಕ ತತ್ವಗಳು

4. ತನ್ನ ಸಂಸತ್ತಿನ ಮೇಲ್ಮನೆಯನ್ನು 'ಹೌಸ್ ಆಫ್ ಲಾರ್ಡ್ಸ್' ಎಂದು ಕರೆಯುವ ರಾಷ್ಟ್ರ

   (A) ಅಮೆರಿಕಾ

   (B) ಭಾರತ

   (C) ಯುನೈಟೆಡ್ ಕಿಂಗ್‌ಡಮ್

   (D) ಕೆನಡಾ

5. ಸರ್ವೋಚ್ಛ ನ್ಯಾಯಾಲಯದ ಕೇಂದ್ರ ಕಚೇರಿ ಇರುವುದು

(A) ನವ ದೆಹಲಿ

(B) ಬೆಂಗಳೂರು

(C) ಮುಂಬೈ

(D) ಕೊಲ್ಕತ್ತ

6. ರಾಜ್ಯ ಕಾರ್ಯಾಂಗದ ಸಂವಿಧಾನಾತ್ಮಕ ಮುಖ್ಯಸ್ಥರು

(A) ರಾಜ್ಯಪಾಲರು

(B) ಪ್ರಧಾನ ಮಂತ್ರಿಯವರು

(C) ಮುಖ್ಯ ಮಂತ್ರಿಯವರು

(D) ಉಪ ರಾಷ್ಟ್ರಪತಿಯವರು

7. ವಿಧಾನ ಪರಿಷತ್ತಿನ ಸದಸ್ಯರ ಅಧಿಕಾರಾವಧಿ

(A) 5 ವರ್ಷಗಳು

(B) 6 ವರ್ಷಗಳು

(C) 4 ವರ್ಷಗಳು

(D) 3 ವರ್ಷಗಳು

8. ಗ್ರಾಹಕ ರಕ್ಷಣಾ ಕಾಯಿದೆಯನ್ನು ಅಂಗೀಕರಿಸಿದ ವರ್ಷ

(A) ಕ್ರಿ.ಶ. 1986

(B) ಕ್ರಿ.ಶ. 1990

(C) ಕ್ರಿ.ಶ. 1983

(D) ಕ್ರಿ.ಶ. 1975

9. ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಎರವಲು ಪಡೆದುಕೊಂಡಿರುವ ಸಂವಿಧಾನ

   (A) ಐರಿಷ್ ಸಂವಿಧಾನ

   (B) ಇಂಗ್ಲೆಂಡಿನ ಸಂವಿಧಾನ

   (C) ಅಮೆರಿಕಾದ ಸಂವಿಧಾನ

   (D) ದಕ್ಷಿಣ ಆಫ್ರಿಕಾದ ಸಂವಿಧಾನ

10. 'ರಾಷ್ಟ್ರಪತಿಯವರು ಕೇವಲ ನಾಮಮಾತ್ರ ಕಾರ್ಯಾಂಗ ಅಧಿಕಾರಿಯಾಗಿರುತ್ತಾರೆ' ಎಂದು ಅಭಿಪ್ರಾಯಪಟ್ಟ ವ್ಯಕ್ತಿ

   (A) ಎಂ.ವಿ. ಪೈಲಿ

   (B) ಡಾ॥ ಬಿ.ಆರ್. ಅಂಬೇಡ್ಕರ್

   (C) ಕೆ.ಎಂ. ಮುನ್ಷಿ

   (D) ವಿ.ವಿ. ಗಿರಿ

II. **ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಗ್ರಾಮ ಸಭೆ ಎಂದರೇನು ?

12. ಕರ್ನಾಟಕ ಲೋಕಸೇವಾ ಆಯೋಗದ ಕೇಂದ್ರ ಕಚೇರಿ ಎಲ್ಲಿದೆ ?

13. 1935 ರ ಭಾರತ ಸರ್ಕಾರದ ಕಾಯ್ದೆಯನ್ನು ಭಾರತೀಯ ಸಂವಿಧಾನದ ರಚನೆಯಲ್ಲಿ ಒಂದು ಬಹುಮುಖ್ಯ ದಾಖಲೆಯಾಗಿ ಪರಿಗಣಿಸಲಾಗಿದೆ. ಏಕೆ ?

14. ಪ್ರಜಾಪ್ರಭುತ್ವ ಎಂದರೇನು ?

15. ಸಂವಿಧಾನ ರಚನಾ ಸಭೆಯಲ್ಲಿ ಧ್ಯೇಯ ನಿರ್ಣಯವನ್ನು ಯಾರು ಮಂಡಿಸಿದರು ?

16. ಬೊಸಾಂಕ್ವೆಟ್‌ರ ಪ್ರಕಾರ ಹಕ್ಕುಗಳೆಂದರೇನು ?

17. ರಾಜ್ಯನೀತಿ ನಿರ್ದೇಶಕ ತತ್ವಗಳನ್ನು 'ಸಂವಿಧಾನದ ರಚನಾತ್ಮಕ ಭಾಗ' ಎಂದು ವರ್ಣಿಸಲಾಗಿದೆ. ಏಕೆ ?

18. ಉಪರಾಷ್ಟ್ರಪತಿಗೆ ಪ್ರಮಾಣ ವಚನವನ್ನು ಯಾರು ಬೋಧಿಸುತ್ತಾರೆ ?

19. ರಾಜ್ಯಸಭೆಯ ಕೋರಂ ಎಷ್ಟು ?

20. ಸರ್ವೋಚ್ಚ ನ್ಯಾಯಾಲಯವು ಸಂವಿಧಾನವನ್ನು ರಕ್ಷಿಸುತ್ತದೆ ಹೇಗೆ ?

21. ರಾಜ್ಯಪಾಲರನ್ನು ಯಾರು ನೇಮಕ ಮಾಡುತ್ತಾರೆ ?

22. ವಿಧಾನ ಸಭೆಯ ಅಧ್ಯಕ್ಷತೆಯನ್ನು ಯಾರು ವಹಿಸುತ್ತಾರೆ ?

23. ಲೋಕ ಅದಾಲತ್ (ಜನತಾ ನ್ಯಾಯಾಲಯ) ನ್ನು ಏಕೆ ಸ್ಥಾಪಿಸಲಾಗಿದೆ ?

24. ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಯಾರು ನೇಮಕ ಮಾಡುತ್ತಾರೆ ?

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $15 \times 2 = 30$

25. 1773 ರ ರೆಗ್ಯೂಲೇಟಿಂಗ್ ಶಾಸನಕ್ಕೆ ಒಳಗೊಂಡಿರುವ ಅಂಶಗಳೇನು ?

26. ಭಾರತವನ್ನು ಒಂದು ಸಾರ್ವಭೌಮತ್ವ ರಾಷ್ಟ್ರವೆಂದು ಏಕೆ ಪರಿಗಣಿಸಲಾಗಿದೆ ?

27. ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ 'ಸಮಾನತೆ' ಎಂಬ ಪದವನ್ನು ಏಕ ಅಳವಡಿಸಿಕೊಳ್ಳಲಾಗಿದೆ ?

28. ಮಾಹಿತಿ ಹಕ್ಕು ಕಾಯ್ದೆಯು ಪ್ರಜಾಭಿವೃದ್ಧಿಗೆ ಹೇಗೆ ನೆರವಾಗಿದೆ ?

29. ಗಾಂಧೀವಾದಿ ತತ್ವಗಳಾವುವು ?

30. ಭಾರತದ ರಾಷ್ಟ್ರಪತಿಯವರನ್ನು ಹೇಗೆ ಆಯ್ಕೆ ಮಾಡಲಾಗುತ್ತದೆ ?

31. ರಾಜ್ಯಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬೇಕಾಗಿರುವ ಅರ್ಹತೆಗಳೇನು ?

32. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ನೀಡಿರುವ ವಿನಾಯಿತಿಗಳಾವುವು ?

33. ರಾಜ್ಯಪಾಲರ ನ್ಯಾಯಿಕ ಅಧಿಕಾರಗಳನ್ನು ತಿಳಿಸಿ.

34. ವಿಧಾನಸಭೆಯನ್ನು ಹೇಗೆ ವಿಸರ್ಜಿಸಬಹುದು ?

35. ವಿಧಾನಸಭೆಯ ಚುನಾವಣಾ ಅಧಿಕಾರಗಳನ್ನು ವಿವರಿಸಿ.

36. ಕಂದಾಯ ನ್ಯಾಯಾಲಯಗಳ ಶ್ರೇಣಿಯನ್ನು ತಿಳಿಸಿ.

37. ಉಚ್ಚ ನ್ಯಾಯಾಲಯದ ಮನವಿ ಅಧಿಕಾರಗಳನ್ನು ವಿವರಿಸಿ.

38. ಜಿಲ್ಲಾ ಪಂಚಾಯಿತಿಯ ಸ್ಥಾಯಿ ಸಮಿತಿಗಳನ್ನು ಹೆಸರಿಸಿ.

39. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ಹೇಗೆ ಪದಚ್ಯುತಿಗೊಳಿಸಬಹುದು ?

IV. **ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

40. ನಮ್ಮ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿ.

***ಅಥವಾ***

ಎಲ್ಲಾ ಪೌರರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ನಮ್ಮ ಸಂವಿಧಾನದಲ್ಲಿ ಹೇಗೆ ಒದಗಿಸಲಾಗಿದೆ ?

41. ನಮ್ಮ ಸಂವಿಧಾನದಲ್ಲಿ ಎಲ್ಲಾ ನಾಗರೀಕರಿಗೂ ನೀಡಿರುವ ಮೂಲಭೂತ ಹಕ್ಕುಗಳನ್ನು ಹೆಸರಿಸಿ.

***ಅಥವಾ***

ರಾಜ್ಯನೀತಿ ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಹಕ್ಕುಗಳ ನಡುವಿನ ಯಾವುದಾದರೂ ಮೂರು ವ್ಯತ್ಯಾಸಗಳನ್ನು ತಿಳಿಸಿ.

42. ರಾಷ್ಟ್ರಪತಿಯವರ ತುರ್ತು ಪರಿಸ್ಥಿತಿಯ ಅಧಿಕಾರಗಳನ್ನು ವಿವರಿಸಿ.

***ಅಥವಾ***

ಲೋಕಸಭಾ ಸಭಾಧ್ಯಕ್ಷರ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.

43. ಸರ್ವೋಚ್ಚ ನ್ಯಾಯಾಲಯದ ಅಧಿಕಾರಗಳನ್ನು ವಿವರಿಸಿ.

***ಅಥವಾ***

ಮುಖ್ಯ ಮಂತ್ರಿಯವರ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.

44. ವಿಧಾನ ಪರಿಷತ್ತಿನ ಸದಸ್ಯರನ್ನು ಹೇಗೆ ಆಯ್ಕೆ ಮಾಡಲಾಗುತ್ತದೆ ?

***ಅಥವಾ***

ಉಚ್ಛ ನ್ಯಾಯಾಲಯವು ಮೂಲಭೂತ ಹಕ್ಕುಗಳನ್ನು ಹೇಗೆ ರಕ್ಷಿಸುತ್ತದೆ ?

45. ನಗರ ಪಾಲಿಕೆ / ಮಹಾನಗರ ಪಾಲಿಕೆಯ ಕಾರ್ಯಗಳೇನು ?

***ಅಥವಾ***

ಕೇಂದ್ರ ಲೋಕ ಸೇವಾ ಆಯೋಗದ ಕಾರ್ಯಗಳೇನು ?

V. **ಈ ಕೆಳಗಿನ ಪ್ರಶ್ನೆಗಳಿಗೆ *ಎಂಟು* ವಾಕ್ಯಗಳಲ್ಲಿ ಉತ್ತರಿಸಿ :** $2 \times 4 = 8$

46. ಪ್ರಧಾನ ಮಂತ್ರಿಯ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.

47. ಗ್ರಾಮ ಪಂಚಾಯಿತಿಯ ಕಾರ್ಯಗಳನ್ನು ವಿವರಿಸಿ.